ಅ) <u>ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>

ವಿಷಯ: 1996ರ Karnataka Ground Water Regulation and Control Bill ಅನ್ನು ಕಾಯ್ದೆಯನ್ನಾಗಿಸಲು ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಬಿ.ಆರ್.ಪಾಟೀಲ್(ಆಳಂದ್): ಮಾನ್ಯ ಅಧ್ಯಕ್ಷರೆ, ಇಡೀ ಜಗತ್ತಿನಲ್ಲಿ ಇವತ್ತು ನೀರಿನ ಸಮಸ್ಯೆ ಉದ್ಭವಿಸಿದ್ದು, ಎಲ್ಲಾ ಕಡೆ ವಿಜ್ಞಾನಿಗಳು, ಚಿಂತಕರು, ಪರಿಸರವಾದಿಗಳು ಬಹಳ ಚಿಂತೆಗೀಡಾಗಿದ್ದಾರೆ. ನಮ್ಮ ರಾಜ್ಯದಲ್ಲೂ ಕೂಡ ನೀರಿನ ಸಮಸ್ಯೆ ಬಹಳ ಗಂಭಿರವಾಗಿದೆ. ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಕೂಡ ಬಹಳ ಮುಕ್ತವಾಗಿ ಎಲ್ಲಾ ಸದಸ್ಯರು ನೀರಿನ ಅಭಾವದ ಬಗ್ಗೆ ಚಿಂತನೆ ಮಾಡಿದ್ದಾರೆ. ಇವತ್ತು ಬಹಳ ಜರೂರಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರ 1996ರಲ್ಲಿ ಏನು ಒಂದು ಮಾದರಿ ಕಾನುನನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿದೆ, ಅಂದಿನಿಂದ ಇಂದಿನವರೆಗೂ ಕೂಡ ಆ ಬಿಲ್ ಸರ್ಕಾರದ ಎದುರುಗಡೆ ಇದೆ. Karnataka Ground Water Regulation and Control Bill, 1996ರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಿಲ್ ಬಹಳ ದಿವಸಗಳಿಂದ ಸರ್ಕಾರದ ಮುಂದೆ ಪೆಂಡಿಂಗ್ ಇದೆ. ಕೇಂದ್ರದಿಂದ ಒಂದು ಮಾದರಿ ಬಿಲ್ ಅನ್ನು ಈಗಾಗಲೇ ರಾಜ್ಯ ಸರ್ಕಾರಕ್ಕೆ ಕಳುಹಿಸಿದ್ದಾರೆ. ಮಹಾರಾಷ್ಟ್ರ ಸರ್ಕಾರ ಈ ಶಾಸನವನ್ನು ಜಾರಿಗೆ ತಂದು ಅಲ್ಲಿ ಅಂತರ್ಜಲವನ್ನು ಹೆಚ್ಚು ಮಾಡುವ ಮೂಲಕ ಇವತ್ತು ನೀರಿನ ಬವಣೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದೆ. ಮಹಾರಾಷ್ಟ್ರದ ನಂತರ ಕರ್ನಾಟಕದಲ್ಲಿ ಇವತ್ತು ನೀರಿನ ಸಮಸ್ಯೆ ಉದ್ಭವವಾಗಿದೆ. ದಯಮಾಡಿ ಈ ಸರ್ಕಾರ ಕೂಡ ಆದಷ್ಟು ಬೇಗ ಆ ಬಿಲ್ ಅನ್ನು ಕಾಯಿದೆ ಮಾಡಿ, ಇವತ್ತು ಏನು ನೀರಿನ ಸಮಸ್ಯೆಗೆ ನಾವು ಒಳಗಾಗಿದ್ದೇವೆ, ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರದವರು ಆ ಕಾನೂನನ್ನು ಇದೇ ಅಧಿವೇಶನದಲ್ಲಿ ತಂದು ಕಾಯಿದೆಯಾಗಿ ಪಾಸ್ ಮಾಡುವ ಮೂಲಕ ಈ Bill ಅನ್ನು ತರಬೇಕೆನ್ನುವಂತಹ ಒತ್ತಾಯವನ್ನು ಶೂನ್ಯ ವೇಳೆಯಲ್ಲಿ ತಮ್ಮ ಅನುಮತಿ ಕೋರಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಪಾಟೀಲರು ಬಹಳ ಗಂಭೀರವಾದ ವಿಷಯವನ್ನು ಪ್ರಸಾಪ ಮಾಡಿದ್ದಾರೆ. ಈ ಜಲನೀತಿ ಬಗ್ಗೆ ಸರಿಯಾದ ನಿರ್ಣಯಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಅಂತರ್ಜಲದ ಮಟ್ಟ ಇವತ್ತು ಏನು ಕಡಿಮೆಯಾಗುತ್ತಿದೆ, ಅದರ ಬಗ್ಗೆ ನಿಜವಾಗಿಯೂ ಹೆಚ್ಚಿನ ಚಿಂತನೆಯನ್ನು ನಾವು ಮಾಡಬೇಕಾಗಿದೆ. ಈಗ ಪಾಟೀಲರು ಏನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಕೇಂದ್ರ ಸರ್ಕಾರದವರು ಆ ಮಸೂದೆ ಬಗ್ಗೆ draft ಮಾಡಿ ಕಳುಹಿಸಿದ್ದು, ಅದನ್ನು ವಿಧಾನಸಭೆಯಲ್ಲಿ

ಮಂಡಿಸುವ ಬಗ್ಗೆ ಆದಷ್ಟು ಬೇಗ ಈ ಸರ್ಕಾರ ಒಂದು ನಿರ್ಣಯವನ್ನು ಕೈಗೊಳ್ಳುತ್ತದೆಂಬ ಮಾತನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಬರುತ್ತಿದ್ದೇನೆ.

ಆ) ವಿಷಯ: ಪರೀಕ್ಷಾ ಸಮಯವಿರುವುದರಿಂದ ಸಂಜೆ ಆರೂವರೆ ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆವರೆಗೆ ವಿದ್ಯುತ್ ಕಡಿತಗೊಳಿಸದಿರುವಂತೆ ಕ್ರಮ ಕೈಗೊಳ್ಳುವುದು.

ಶ್ರೀ ಆರ್.ಧ್ರುವನಾರಾಯಣ(ಸಂತೇಮರಹಳ್ಳಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ನಿರಂತರವಾಗಿ ವಿದ್ಯುತ್ ಕಡಿತವುಂಟಾಗುತ್ತಿದೆ. ತಮಗೆ ಗೊತ್ತಿರುವಂತೆ, ಈಗ SSLC ಪರೀಕ್ಷೆ ನಡೆಯುತ್ತಿದೆ. ವಿದ್ಯಾರ್ಥಿಗಳಿಗೆ ಇದು ಪರೀಕ್ಷಾ ಸಮಯ. ಸಾಯಂಕಾಲದ ವೇಳೆ ಸುಮಾರು 6 ರಿಂದ ರಾತ್ರಿ 11 ಗಂಟೆವರೆಗೂ ಬಹಳಷ್ಟು ಸಲ ವಿದ್ಯುತ್ ಕಡಿತವುಂಟಾಗುತ್ತಿದೆ. ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಪರೀಕ್ಷೆ ಇರುವ ಈ ಸಮಯದಲ್ಲಿ ತಾವು ದಯವಿಟ್ಟು ನಿರಂತರವಾಗಿ ವಿದ್ಯುತ್ ಕೊಡಬೇಕು. ಏಕೆಂದರೆ, ತಮಗೆ ಗೊತ್ತಿದೆ. BPL ಪಟ್ಟಿಯಲ್ಲಿ ಕೂಡ ಬಡವರಿಗೆ ಇವತ್ತು ಸರಿಯಾದ ರೀತಿಯಲ್ಲಿ ಕಾರ್ಡುಗಳನ್ನು ಕೊಟ್ಟಿಲ್ಲ. ಸೀಮೆಎಣ್ಣೆಯೂ ಸಮರ್ಪಕವಾಗಿ ವಿತರಣೆಯಾಗಿಲ್ಲ. ಈ ದಿಸೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರಾತ್ರಿ ವೇಳೆ ಕತ್ತಲಿನಲ್ಲಿ ಓದುವುದಕ್ಕಾಗುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಹಳಷ್ಟು ಸಮಸ್ಯೆಯಾಗಿದೆ. ದಯಮಾಡಿ ಈ ವಿದ್ಯುತ್ ಕಡಿತವನ್ನು ತೆಗೆಯಬೇಕು. ಪರೀಕ್ಷಾ ಸಮಯವಾಗಿರುವುದರಿಂದ ಸಾಯಂಕಾಲದ ಸಮಯದಲ್ಲಿ ಆರೂವರೆ ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆವರೆಗೂ ನಿರಂತರವಾಗಿ ವಿದ್ಯುತ್ ಒದಗಿಸತಕ್ಕಂಥ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ, ಅದರಲ್ಲಿ ಏಪ್ರಿಲ್ ತಿಂಗಳಿನಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುತ್ತಿರುವ ಸಂದರ್ಭದಲ್ಲಿ ವಿದ್ಯುತ್ ಕಡಿತವಾಗುವುದರಿಂದ ಅವರುಗಳಿಗೆ ತೊಂದರೆಯಾಗುತ್ತದೆಂಬ ಭಾವನೆಗಳನ್ನು ಅವರು ವ್ಯಕ್ತಪಡಿಸಿದ್ದಾರೆ. ಇವತ್ತು ವಿದ್ಯುತ್ ಮಂತ್ರಿಗಳ ಜೊತೆ ಮಾತನಾಡಿ, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರ ಸರಿಯಾದ ಕ್ರಮ ಕೈಗೊಳ್ಳುತ್ತದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.